SC.270-2019
**PW-04**

**ಸಾಕ್ಷಿಯನ್ನು ದಿನಾಂಕ 25.09.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂ.ಎಸ್ ವಕೀಲರಿಂದಃ**

ಆರೋಪಿ ಮತ್ತು ನನ್ನ ಮಗಳು ಮದುವೆಗೂ ಮುಂಚೆ ಪ್ರೀತಿ ಮಾಡುತ್ತಿದ್ದರು ಎಂದರೆ ನಿಜ . ಅವರು ಮದುವೆಯಾಗುವುದು ಆರೋಪಿತನ ಮನೆಯವರಿಗೆ ಇಷ್ಟ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾವು ಆರೋಪಿ ಮತ್ತು ನನ್ನ ಮಗಳ ಮದುವೆ ಮಾಡಿದ್ದೆವು ಎಂದರೆ ನಿಜ . ಮದುವೆಯ ಬಳಿಕ ಆರೋಪಿತನ ಮನೆಯವರು ಅವರನ್ನು ಮನೆಗೆ ಸೇರಿಸಿಕೊಂಡಿರಲಿಲ್ಲ ಎಂದರೆ ಅವರು ಮನೆಗೆ ಹೋಗಿಲ್ಲ. ನಮ್ಮ ಮನೆಯ ಹಿಂಭಾಗದಲ್ಲಿ ಇದ್ದ ಖಾಲಿ ಮನೆಯನ್ನು ಆರೋಪಿ ಮತ್ತು ನನ್ನ ಮಗಳಿಗೆ ವಾಸಕ್ಕೆ ಕೊಟ್ಟಿದ್ದೆವು ಎಂದರೆ ನಿಜ . ಆ ಕಾಲಕ್ಕೆ ಆರೋಪಿ ಹಾರ್ಡ್ ವೇರ್ ಅಂಗಡಿಯಲ್ಲಿ ಕೆಲಸ ಮಾಡಿಕೊಂಡು ಚೆನ್ನಾಗಿದ್ದರು ಎಂದರೆ ನಿಜ , ಸಾಕ್ಷಿಯು ಸ್ವತಃ ಹೇಳುತ್ತಾರೆ ಗಂಡ ಹೆಂಡತಿ ಜಗಳ ಮಾಡುತ್ತಿದ್ದರು, ನಾನು ಹೋಗಿ ಸಮಾಧಾನ ಮಾಡುತ್ತಿದ್ದೆ . ಆರೋಪಿ ತನ್ನ ತಮ್ಮ ನೌಷದ್ ನನ್ನು ಕರೆದುಕೊಂಡು ಬಂದು ಮನೆಯಲ್ಲಿ ಇಟ್ಟುಕೊಂಡಿದ್ದು, ಅವನೊಂದಿಗೆ ಸಂಬಂಧ ಇದೆ ಎಂದು ನನ್ನ ಮಗಳೊಂದಿಗೆ ಜಗಳ ಮಾಡುತ್ತಿದ್ದ. ಅಂದಾಜು ಆರು ತಿಂಗಳು ನೌಷದ್ ಅವರ ಮನೆಯಲ್ಲಿ ಇದ್ದ . ನೌಷದ್ ಯಾವತ್ತು ಆರೋಪಿತನ ಮನೆಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿತ ನನ್ನ ಮಗಳು ಮತ್ತು ಮೊಮ್ಮಕ್ಕಳು ನಮ್ಮ ಮನೆಯಲ್ಲಿ ಇರುವವರೆಗೆ ಚೆನ್ನಾಗಿದ್ದರು ಎಂದರೆ ಸರಿಯಲ್ಲ. ಆರೋಪಿ ಬೆಳಿಗ್ಗೆ 8.00 ರಿಂದ 9.00 ಕ್ಕೆ ಕೆಲಸಕ್ಕೆ ಹೋದರೆ ರಾತ್ರಿ ವಾಪಸ್ಸು ಬರುತ್ತಿದ್ದ ಎಂದರೆ ಸರಿಯಲ್ಲ. ಆರೋಪಿ ಮಕ್ಕಳನ್ನು ಮಾನಸ ಕಾನ್ವೆಂಟಿಗೆ ಸೇರಿಸಿದ್ದ ಎಂದರೆ ನಿಜ . ಆರೋಪಿಯೇ ಮಕ್ಕಳನ್ನು

ಶಾಲೆಗೆ ಬಿಡುತ್ತಿದ್ದ ಎಂದರೆ ಸರಿಯಲ್ಲ. ಆರೋಪಿಯಿಂದ ನನ್ನ ಗಂಡ ಒಂದು ಲಕ್ಷ ಹಣವನ್ನು ಬೋಗ್ಯದ ಹಣ ಎಂದು ಪಡೆದುಕೊಂಡಿದ್ದರು ಎಂದರೆ ನಿಜ , ಸಾಕ್ಷಿಯು ಸ್ವತಃ ಹೇಳುತ್ತಾರೆ, ಮನೆ ಖಾಲಿ ಮಾಡುವಾಗ ಅದನ್ನು ವಾಪಸ್ಸು ಕೊಟ್ಟಿದ್ದರು.

ನನ್ನ ಮಗಳಿಗೆ ನಮ್ಮ ಮನೆಯಲ್ಲಿ ಇರಲು ಇಷವಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮಗಳೇ ಒತ್ತಾಯದಿಂದ ಗಾಯಿತ್ರಿಪುರಂಗೆ ಕರೆದುಕೊಂಡು ಹೋಗಿ ವಾಸ ಇದ್ದಳು ಎಂದರೆ ಸರಿಯಲ್ಲ. ಮನೆ ಖಾಲಿ ಮಾಡುವಾಗ ನನ್ನ ಮಗಳೇ ಒಂದು ಲಕ್ಷ ಹಣ ಪಡೆದಿದ್ದಳು ಎಂದರೆ ನಿಜ, ಸಾಕ್ಷಿಯು ಸ್ವತಃ ಹೇಳುತ್ತಾರೆ ಅದರಲ್ಲಿ ಇಪ್ಪತ್ತು ಸಾವಿರ ಹಣ ಆರೋಪಿ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ಆ ಒಂದು ಲಕ್ಷದ ಪೈಕಿ ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ನನ್ನ ಮಗಳು ಗಾಯಿತ್ರಿಪುರಂ ನ ಮನೆಗೆ ಅಡ್ವಾನ್ಸ್ ಆಗಿ ಕೊಟ್ಟಿದ್ದಳು ಎಂದರೆ ನಿಜ . ಆ ಮನೆಯ ಬಾಡಿಗೆ ಪತ್ರವನ್ನು ನನ್ನ ಮಗಳ ಹೆಸರಿಗೆ ಮಾಡಿಕೊಂಡಿದ್ದಳು ಎಂದರೆ ಸರಿಯಲ್ಲ. ಗಾಯಿತ್ರಿಪುರಂ ನ ಮನೆಯ ಅಕ್ಕ ಪಕ್ಕದಲ್ಲಿ ಚಿಕ್ಕ ಚಿಕ್ಕ ಮನೆಗಳು ಇವೆ ಎಂದರೆ ನಿಜ . ಆ ಮನೆಯಲ್ಲಿ ಸ್ವಲ್ಪ ಗಲಾಟೆಯಾದರೆ ಅಕ್ಕ ಪಕ್ಕದ ಮನೆಯವರಿಗೆ ಗೊತ್ತಾಗುತ್ತದೆ ಎಂದರೆ ನಿಜ .

ನನ್ನ ಮಗಳು ಮರಣ ಹೊಂದಿದ ಹಿಂದಿನ ದಿನ ಆರೋಪಿ ನಮ್ಮ ಮನೆಗೆ ಬಂದಿದ್ದ. ಆ ಕಾಲಕ್ಕೆ ರಾತ್ರಿ ನಮ್ಮ ಮನೆಯಲ್ಲೇ ಉಳಿದುಕೊಂಡು ಮರುದಿನ ಬೆಳಿಗ್ಗೆ 10.00 ರವರೆಗೆ ನಮ್ಮ ಮನೆಯಲ್ಲಿ ಇದ್ದ . ನನ್ನ ಮಗಳು ರಕ್ತದ ಮಡುವಿನಲ್ಲಿ ಇದ್ದ ವಿಚಾರ ಮಧ್ಯಾಹ್ನ 2.00 ಘಂಟೆಗೆ ಗೊತ್ತಾಯಿತು . ನಾವು ಅಲ್ಲಿಗೆ ಹೋದ ಬಳಿಕ ನಮ್ಮ ಬಳಿಕ ರಕ್ತದ ಮಡುವಿನಲ್ಲಿ ಬಿದ್ದಿದ್ದನ್ನು ನೋಡಿ ನಮ್ಮ ಸಂಬಂಧಿಕರನ್ನು ಕರೆಸಿದ್ದೆವು ಎಂದರೆ ನಿಜ . ನಾವು ಹೋದ ಬಳಿಕ ಆರೋಪಿ ಅಂಗಡಿಯಿಂದ ಮನೆಗೆ ಬಂದಿದ್ದ ಎಂದರೆ ಸರಿಯಲ್ಲ. ಆಗ ನಾನು , ನನ್ನ ಮಕ್ಕಳು ಮತ್ತು ಸಂಬಂಧಿಕರು ಸೇರಿ ಆರೋಪಿತನಿಗೆ ನೀನೇ ಕೊಲೆ ಮಾಡಿದ್ದೀಯಾ ಎಂದು ಹೊಡೆದಿರುತ್ತೇವೆ ಎಂದರೆ

ಸರಿಯಲ್ಲ. ನಾವೆಲ್ಲರೂ ಹೊಡೆದಿದ್ದರಿಂದ ಆರೋಪಿ ಹೆದರಿ ಅಲ್ಲಿಂದ ಓಡಿ ಹೋಗಿದ್ದ ಎಂದರೆ ಸರಿಯಲ್ಲ . ನನ್ನ ಮೂರು ಜನ ಮೊಮ್ಮಕ್ಕಳು ನಮ್ಮ ಬಳಿಯೇ ಇದ್ದಾರೆ ಎಂದರೆ ನಿಜ . ಆರೋಪಿ ಜಾಮೀನಿನ ಮೇಲೆ ಬಂದ ಬಳಿಕ ತನ್ನ ಮಕ್ಕಳನ್ನು ಕಳುಹಿಸುವಂತೆ ಕೇಳಿದ್ದ ಎಂದರೆ ಸರಿಯಲ್ಲ. ನಾವು ನನ್ನ ಮೊಮ್ಮಕ್ಕಳನ್ನು ಆರೋಪಿಯ ಜೊತೆ ಮಾತನಾಡಲು ಬಿಡುತ್ತಿಲ್ಲ ಎಂದರೆ ನನ್ನ ಮಗಳನ್ನು ಕೊಲೆ ಮಾಡಿದ್ದರಿಂದ ಹೆದರಿಕೆಯಿಂದ ಬಿಡುತ್ತಿಲ್ಲ. ನನ್ನ ಮೊಮ್ಮಕ್ಕಳಿಗೆ ನಾವೇ ಇದೇ ರೀತಿ ಸಾಕ್ಷಿ ಹೇಳಬೇಕೆಂದು ಕಳುಹಿಸಿಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಮಗಳಿಗೂ ನೌಷದ್ ಗೂ ಯಾವುದೇ ಸಂಬಂಧ ಇರಲಿಲ್ಲ. ಆರೋಪಿ ಯಾವತ್ತು ನೌಷದ್ ಜೊತೆ ಸಂಬಂಧ ಇಟ್ಟುಕೊಂಡಿದ್ದೀಯಾ ಎಂದು ನನ್ನ ಮಗಳಿಗೆ ಕಿರುಕುಳ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿ ನನ್ನ ಮಗಳು ಮತ್ತು ಮೊಮ್ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದ ಎಂದರೆ ಸರಿಯಲ್ಲ. ನನ್ನ ಮಗಳ ಸಾವಿಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿಯ ಮನೆಯಲ್ಲಿದ್ದ ಹಣ , ಒಡವೆ ಮತ್ತು ಸಾಮಾನುಗಳನ್ನು ನಮ್ಮ ಮನೆಯಲ್ಲಿ ಇಟ್ಟುಕೊಂಡಿದ್ದೇವೆ ಎಂದರೆ ನಿಜ . ಆ ಎಲ್ಲಾ ಹಣ , ಒಡವೆ ಮತ್ತು ಸಾಮಾನುಗಳನ್ನು ವಾಪಸ್ಸು ಕೊಡಬೇಕಾಗುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ತ ನ್ಯಾಯಾಧೀಶರು

SC.270-2019
**PW-04**

ಮೈಸೂರು